# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 215 |
| 2 | ಸದಸ್ಯರ ಹೆಸರು | : | ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 17-02-2022 |
| 4 | ಉತ್ತರಿಸುವವರು | : | ಮಾನ್ಯ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | **J.W.Marriott** ಎಂಬ ಬೃಹತ್ ಕಟ್ಟಡಕ್ಕೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ. 49406-407/2021 ರಲ್ಲಿ ಈ ಕಟ್ಟಡದ ಸ್ವಾಧೀನಾನುಭವಕ್ಕೆ ಸಂಬಂಧಿಸಿದ ಕಡತವನ್ನು 12.02.2013ರ ಒಳಗೆ ಪರಿಶೀಲಿಸಬೇಕೆಂದು ಮಾತ್ರವೇ ಆದೇಶಿಸಿದ್ದು, ಈ ಕಟ್ಟಡಕ್ಕೆ ಸ್ವಾಧೀನಾನುಭವ ಪತ್ರ ನೀಡಲು ಯಾವುದೇ ರೀತಿಯಲ್ಲಿ ಆದೇಶಿಸಿರುವುದಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮಾನ್ಯ ಘನ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ. 49406-407/2012 ದಿನಾಂಕ: 05-02-2013ರ ಆದೇಶದಂತೆ ದಿನಾಂಕ: 12-02-2013ರ ಒಳಗೆ **J.W.Marriott** ಕಟ್ಟಡಕ್ಕೆ ಭಾಗಶಃ ಸ್ವಾಧೀನಾನುಭವ ಪ್ರಮಾಣ ಪತ್ರವನ್ನು ನೀಡುವ ಸಂಬಂಧ, ಸದರಿ ಕಟ್ಟಡವನ್ನು ನಿಯಮಾನುಸಾರ ಪರಿಶೀಲಿಸಿ ಕ್ರಮ ಜರುಗಿಸುವಂತೆ ಆದೇಶಿಸಿದ್ದರ ಮೇರೆಗೆ ಸದರಿ ಕಟ್ಟಡವನ್ನು ಹಾಗೂ ಕಟ್ಟಡಕ್ಕೆ ಸಂಬಂಧಿಸಿದ ಕಡತವನ್ನು ಪರಿಶೀಲಿಸಿ ಸ್ವಾಧೀನಾನುಭವ ಪ್ರಮಾಣಪತ್ರ (ಭಾಗಶಃ) ನೀಡಲಾಗಿರುತ್ತದೆ. |
| ಆ) | **J.W.Marriott** ಈ ಕಟ್ಟಡಕ್ಕೆ ಸ್ವಾಧೀನಾನುಭವ ಪತ್ರ ನೀಡಲು ಮಾನ್ಯ ಉಚ್ಚ ನ್ಯಾಯಾಲಯವು ಯಾವುದೇ ರೀತಿಯಲ್ಲಿ ಆದೇಶ ನೀಡದಿದ್ದರೂ ಸರ್ಕಾರಕ್ಕೆ ತಪ್ಪು ಮಾಹಿತಿ ನೀಡಿ ಸ್ವಾಧೀನಾನುಭವ ಪತ್ರ ನೀಡಲು ಸಹಕರಿಸಿದ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ; | **J.W.Marriott** ಕಟ್ಟಡಕ್ಕೆ ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ. 49406-407/2012 ರಲ್ಲಿ ದಿನಾಂಕ: 17-01-2013ರ ಮಧ್ಯಂತರ ಆದೇಶದಂತೆ ಅರ್ಜಿದಾರರ ಮನವಿಯನ್ನು ಪರಿಗಣಿಸಿ ದಿನಾಂಕ: 31-01-2013 ರೊಳಗೆ ಭಾಗಶಃ ಸ್ವಾಧೀನಾನುಭವ ಪ್ರಮಾಣಪತ್ರ ನೀಡುವ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸಲು ಆದೇಶಿಸಿದ್ದರೂ ಸಹ ಸದರಿ ಪ್ರಕ್ರಿಯೆಯು ಪೂರ್ಣಗೊಳ್ಳದೇ ಇರುವುದರಿಂದ, ಮಾನ್ಯ ಘನ ಉಚ್ಚ ನ್ಯಾಯಾಲಯವು ಮತ್ತೊಂದು ಅವಕಾಶವನ್ನು ನೀಡಿ ದಿನಾಂಕ: 12-02-2013 ರೊಳಗಾಗಿ ಸಂಪೂರ್ಣ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ದಿನಾಂಕ: 05-02-2013ರ ಘನ ಉಚ್ಚ ನ್ಯಾಯಾಲಯದ ಆದೇಶದಲ್ಲಿ ಸೂಚಿಸಿರುವ ಮೇರೆಗೆ ಕಟ್ಟಡ ಉಪವಿಧಿಗಳು -2003 ರಲ್ಲಿ ಭಾಗಶಃ ಸ್ವಾಧೀನಾನುಭವ ಪ್ರಮಾಣಪತ್ರ ನೀಡಲು ಅವಕಾಶವಿರುವುದರಿಂದ, ಅರ್ಜಿದಾರರ ಮನವಿಯನ್ನು ಪರಿಶೀಲಿಸಿ ದಿನಾಂಕ: 08-02-2013 ರಂದು ಭಾಗಶಃ ಸ್ವಾಧೀನಾನುಭವ ಪ್ರಮಾಣಪತ್ರ ನೀಡಲಾಗಿರುತ್ತದೆ. |

...2.

| | | |
|---|---|---|
| ಇ) | ಯಾವುದೇ ಕಟ್ಟಡಕ್ಕೆ ಭಾಗಶಃ ಸ್ವಾಧೀನಾನುಭವ ಪ್ರಮಾಣಪತ್ರ ನೀಡಲು ಮಾನದಂಡಗಳೇನು; ಯಾವ ನಿಯಮದನ್ವಯ ಬಿಬಿಎಂಪಿ ಆಯುಕ್ತರು ಭಾಗಶಃ ಸ್ವಾಧೀನಾನುಭವ ಪತ್ರ ನೀಡುತ್ತೀದ್ದಾರೆ | ಯಾವುದೇ ಕಟ್ಟಡಕ್ಕೆ ಭಾಗಶಃ ಸ್ವಾಧೀನಾನುಭವ ಪ್ರಮಾಣ ಪತ್ರ ನೀಡಲು ಕಟ್ಟಡ ಉಪವಿಧಿಗಳು-2003ರ ಉಪವಿಧಿ ನಿಯಮ 5.7 ರಲ್ಲಿ ಈ ಕೆಳಕಂಡಂತೆ ವ್ಯಾಖ್ಯಾನಿಸಲಾಗಿರುತ್ತದೆ.<br><br>**Occupancy or letting of the new buildings:** No person shall occupy or allow any other person to occupy any new building or part of a new building for any purpose whatsoever until Occupancy Certificate to such buildings or part thereof has been granted by an officer authorised to give such certificate if in his opinion in every respect the building is completed according to the sanctioned plans and fit for the use for which it is erected. The authority may in exceptional cases (after recording reasons) allow partial occupancy for different floors of a building. (ಪ್ರತಿಯನ್ನು ಅನುಬಂಧದಲ್ಲಿ ನೀಡಿದೆ.)<br><br>ಅದರಂತೆ ಯಾವುದೇ ಕಟ್ಟಡವನ್ನು ನಕ್ಷೆ ಮಂಜೂರಾತಿಯನುಸಾರ ನಿರ್ಮಿಸಿದ್ದು ಹಾಗೂ ಉಪಯೋಗಕ್ಕೆ ಅರ್ಹವಿದ್ದಲ್ಲಿ ವಲಯ ನಿಯಮಾವಳಿಯನುಸಾರ ಪರಿಶೀಲಿಸಿ ಭಾಗಶಃ ಸ್ವಾಧೀನಾನುಭವ ಪ್ರಮಾಣಪತ್ರ ನೀಡಲು ಅವಕಾಶ ಇರುತ್ತದೆ. |
| ಈ) | ಭಾಗಶಃ ಸ್ವಾಧೀನಾನುಭವ ಪತ್ರವನ್ನು ಯಾವ ಹಂತದಲ್ಲಿ ನೀಡಲಾಗಿದೆ; ಈ ಸ್ವಾಧೀನಾನುಭವ ಪತ್ರದಿಂದ ವ್ಯಾಪಾರ ವಹಿವಾಟುಗಳನ್ನು ನಡೆಸಬಹುದು ಎಂಬುದಾಗಿ ಯಾವ ನಿಯಮದಲ್ಲಿ ತಿಳಿಸಲಾಗಿದೆ; ನಗರದ ಬಡವರಿಗೂ ಕಟ್ಟಡಗಳಿಗೆ ಭಾಗಶಃ ಸ್ವಾಧೀನಾನುಭವ ಪತ್ರ ಪಡೆಯಲು ನಿಯಮದಲ್ಲಿ ಅವಕಾಶವಿದೆಯೇ; (ಸಂಪೂರ್ಣ ಮಾಹಿತಿ ಒದಗಿಸುವುದು) | ಕಟ್ಟಡ ಉಪವಿಧಿಗಳು – 2003ರ ಉಪವಿಧಿ ನಿಯಮ 5.7 ರನ್ವಯ ಸದರಿ ಕಟ್ಟಡದ 10ನೇ ಅಂತಸ್ತನ್ನು ಅನುಮೋದಿತ ನಕ್ಷೆಯಂತೆ ಪೂರ್ಣಗೊಳಿಸಿದ ನಂತರ ಭಾಗಶಃ ಸ್ವಾಧೀನಾನುಭವ ಪ್ರಮಾಣಪತ್ರವನ್ನು ನೀಡಲಾಗಿರುತ್ತದೆ. |

ನಅಇ 81 ಎಂಎನ್‌ಯು 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ